ದಿಃ 21-06-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಎದುರುದಾರರ ಪರ ವಕೀಲರಾದ ಶ್ರೀ ಬಿ.ಎಚ್ ಇವರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ. ಷಡ್ಯೂಲ್ ಐಟಂ ನಂ 4 ರ ಆಸ್ತಿಯ ಸ್ವಾದೀನ ರಸೀದಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-43, ಮಹಜರ್‌ನ್ನು ನಿಪಿ-44, ನಿಪಿ-43 ರಲ್ಲಿ ಸಾಕ್ಷಿ ಸಹಿಯನ್ನು ನಿಪಿ-43(ಎ) ಮತ್ತು ನಿಪಿ-44 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-44(ಎ) ಎಂದು ಗುರ್ತಿಸಲಾಯಿತು.

ತಕರಾರುದಾರರ ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರಿಂದ ಪಾಟೀ ಸವಾಲುಃ

ಸರ್ವೆ ನಂ 32/ಪಿ1 ಒಟ್ಟು ವಿಸ್ತೀರ್ಣ 4 ಎಕರೆ 5 ಗುಂಟೆ ವಿಸ್ತೀರ್ಣ ಇರುತ್ತದೆ. ವಾರೆಂಟ್ ಷಡ್ಯೂಲ್‌ನಲ್ಲಿ ನಮೂದು ಮಾಡಲಾದ ವಿಸ್ತೀರ್ಣದ ಬಗ್ಗೆ ತಿಳಿದುಕೊಂಡು ಅದರ ಒಟ್ಟು ವಿಸ್ತೀರ್ಣ ಈಗ ಹೇಳುತ್ತಿದ್ದೇನೆ. ಷಡ್ಯೂಲ್ ಎಂದರೆ ಆಸ್ತಿಯ ನಂಬರು ವಿಸ್ತೀರ್ಣ ಮತ್ತು ಚಕ್ಕುಬಂದಿ ಒಳಗೊಂಡಿರುತ್ತದೆ ಅಂದರೆ ಸರಿ. ನಾನು ವಾರೆಂಟ್‌ನ್ನು ಹೊರತು ಪಡಿಸಿ ಬೇರೆ ದಾಖಲೆಯನ್ನು ಈ ನ್ಯಾಯಾಲಯದಿಂದ ಪಡೆದಿರುವುದಿಲ್ಲ. ವಾರಂಟ್‌ನಲ್ಲಿ ಸರ್ವೆಯರ ಇವರ ಸಹಾಯದೊಂದಿಗೆ ಆಸ್ತಿಯ ಸ್ವಾದೀನವನ್ನು ನೀಡಲು ಆದೇಶ ಇತ್ತು, ನಾನು ವಾರೆಂಟ್‌ನ್ನು ಸರ್ವೆಯರ ಇವರಿಗೆ ತೋರಿಸಿ ಕರೆದುಕೊಂಡು ಹೋಗಿರುತ್ತೇನೆ. ವಾರೆಂಟ್‌ನ್ನು ಹೊರತು ಪಡಿಸಿ ನಾನು ಸರ್ವೆಯರ್ ಇವರಿಗೆ ಬೇರೆ ದಾಖಲೆಯನ್ನು ತೋರಿಸಿರುವುದಿಲ್ಲ ಮತ್ತು ನೀಡಿರುವುದಿಲ್ಲ. ವಾರಂಟ್‌ನಲ್ಲಿ ನಮೂದು ಮಾಡಿದ ಚಕ್ಕುಬಂದಿಯನ್ನು ಸ್ವತ್ತಿನ ಸ್ವಾದೀನ ರಸೀದಿಯಲ್ಲಿ ನಮೂದು ಮಾಡಿರುತ್ತೇನೆ. ವಾರೆಂಟ್‌ನಲ್ಲಿ ನೀಡಿರುವ ಚಕ್ಕುಬಂದಿ 4 ಎಕರೆ 5 ಗುಂಟೆ ಇತ್ತು ಅಂದರೆ ಸರಿ. 1 ಎಕರೆ 5 ಗುಂಟೆ ಜಮೀನಿನ ಚಕ್ಕುಬಂದಿ ವಾರಂಟ್‌ನಲ್ಲಿ ಮತ್ತು ಸ್ವತ್ತು ಸ್ವಾದೀನ ರಸೀದಿಯಲ್ಲಿ ಇರುವುದಿಲ್ಲ.

2. ವಾರಂಟ್‌ನಲ್ಲಿ ನಮೂದು ಮಾಡಲಾದ ಪೂರ್ವ ಮತ್ತು ಪಶ್ಚಿಮದ ಚಕ್ಕುಬಂದಿ ರಸ್ತೆ ಇದ್ದು ಅದು ಪೂರ್ವ ಪಶ್ಚಿಮವಾಗಿರುತ್ತದೆ ಅಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಸದರಿ ರಸ್ತೆ ಅಸ್ತಿತ್ವದಲ್ಲಿರಲಿಲ್ಲ. ಸರ್ವೆಯರ್‌ರವರು ಅಳತೆ ಕಾರ್ಯವನ್ನು ಪೂರ್ವ ದಿಕ್ಕಿನಿಂದ ಪ್ರಾರಂಭ ಮಾಡಿರುತ್ತಾರೆ. ಅಳತೆ ಕಾರ್ಯವನ್ನು ಚೈನ್ ಮೂಲಕ ಮಾಡಲಾಗಿರುತ್ತದೆ. ಪೂರ್ವಕ್ಕೆ ಇರುವ ಆಸ್ತಿ ಯಾರ ಸ್ವಾದೀನದಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಖಾಲಿ ನಿವೇಶನ ಮತ್ತು ಹರಿಹರ ಹರಪನಹಳ್ಳಿ ರಸ್ತೆ ಇರುತ್ತದೆ. ಹರಿಹರ ಹರಪನಹಳ್ಳಿಯ ರಸ್ತೆಯು ಪೂರ್ವಕ್ಕೆ ಕಿರ್ಲೊಸ್ಕರ ಇವರ ಕಟ್ಟಡ ಮತ್ತು ಕಾಂಪೌಂಡ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ಸದರಿ ಕಟ್ಟಡದ ಪೂರ್ವಕ್ಕೆ 1 ಎಕರೆ 20 ಗುಂಟೆ ಜಮೀನು ಅನ್ಯ ಸಂಕ್ರಮಣ ಆಗಿರುವ ವಿಚಾರ ನನಗೆ ಗೊತ್ತಿಲ್ಲ.

3. ಸರ್ವೆ ನಂ 32/ಪಿ1 ರಲ್ಲಿ ನಿವೇಶನಗಳು ಇರುತ್ತವೆ ಅಂದರೆ ಸರಿಯಲ್ಲ. ಸದರಿ ಸರ್ವೆ ನಂಬರಿನಲ್ಲಿ ಕಿರ್ಲೊಸ್ಕರ ಕಂಪನಿ ಕಟ್ಟಡ ಇರುತ್ತದೆ ಅಂದರೆ ಸರಿಯಲ್ಲ. ಕಂಪನಿ ಕಟ್ಟಡದ ಪಶ್ಚಿಮಕ್ಕೆ ಹರಿಹರ ಹರಪನಹಳ್ಳಿ ರಸ್ತೆ ಇರುತ್ತದೆ ಅಂದರೆ ಸರಿಯಲ್ಲ. ಸ್ವತ್ತು ಸ್ವಾದೀನ ರಸೀದಿಯಲ್ಲಿ ನಮೂದು ಮಾಡಲಾದ ಚಕ್ಕುಬಂದಿ ಪ್ರಕಾರ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ಆಸ್ತಿ ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸ್ವತ್ತು ಸ್ವಾದೀನ ರಸೀದಿಯನ್ನು ತಯಾರು ಮಾಡಿರುತ್ತೇನೆ ಅಂದರೆ ಸರಿಯಲ್ಲ. ತಕರಾರುದಾರರಾದ ಗಣೇಶ ಇವರಿಗೆ ಸಂಬಂದಿಸಿದ ನಿವೇಶನಗಳ ಆಸ್ತಿಯನ್ನು ಗುರುತು ಮಾಡಿ ಸ್ವಾದೀನ ರಸೀದಿ ತಯಾರು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಗಣೇಶ ಇವರ ಆಸ್ತಿಯ ಸ್ವಾದೀನಕ್ಕೆ ನಾನು ಗುರ್ತಿಸಿದ ಕಾರಣ ಸದರಿಯವರು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ಈ ಪ್ರಕರಣದ ಎಲ್ಲಾ ಜೆ.ಡಿ.ಆರ್ ಇವರ ಹೆಸರುಗಳನ್ನು ಹೇಳಬಲ್ಲೆ. ನಾನು ಸ್ಥಳಕ್ಕೆ ಹೋದಾಗ ಜೆ.ಡಿ.ಆರ್ ರವರುಗಳು ಸ್ಥಳದಲ್ಲಿರಲಿಲ್ಲ. ನಾನು ಮತ್ತು ಸರ್ವೆಯರ ಇಬ್ಬರು ತೀರ್ಪುಗುಣಿದಾರರ ಮಾತು ಕೇಳಿ ಸುಳ್ಳು ದಾಖಲೆಗಳನ್ನು ತಯಾರು ಮಾಡಿರುತ್ತೇವೆ ಅಂದರೆ ಸರಿಯಲ್ಲ. ಡಿಕ್ರಿದಾರರಿಗೆ ನಾನು ಆಸ್ತಿಯ ಸ್ವಾದೀನವನ್ನು ವಹಿಸಿಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಸರ್ವೆಯರ್‌ರವರು ಸ್ಕೆಚ್‌ನ್ನು ತಂದಿದ್ದರು. ಸದರಿ ಸ್ಕೆಚ್‌ನಲ್ಲಿ 1 ಎಕರೆ 5 ಗುಂಟೆಗೆ ಚಕ್ಕುಬಂದಿ ನಮೂದು ಮಾಡಿರಲಿಲ್ಲ. 1 ಎಕರೆ 5 ಗುಂಟೆ

ಜಮೀನು ಗುರ್ತಿಸಿದ ನಂತರ ನಾಲ್ಕು ಕಡೆ ಎಷ್ಟು ಜಮೀನು ಉಳಿದಿತ್ತು ಎಂಬ ವಿಚಾರವನ್ನು ರಸೀದಿಯಲ್ಲಿ ಬರೆದಿರುವುದಿಲ್ಲ. ಸದರಿ ದಾಖಲೆಗಳನ್ನು ನಾನು ಕಚೇರಿಯಲ್ಲಿ ಕುಳಿತು ತಯಾರು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸ್ವಾದೀನ ರಸೀದಿ ಮತ್ತು ಮಹಜರ್ ನಾನೇ ಬರೆದಿರುತ್ತೇನೆ ಅಂದರೆ ಸರಿಯಲ್ಲ. ಸದರ ದಾಖಲೆಗಳನ್ನು ಸರ್ವೆಯರ್ ನನಗೆ ಹೇಳಿ ಬರೆಸಿರುವುದಿಲ್ಲ. ಸರ್ವೆಯರ್ ಇವರು ಸ್ಕೆಚ್ ತಂದಿರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯದಿಂದ ಸರ್ವೆಯರ್ ಇವರು ಸ್ಕೆಚ್ ತಂದಿದ್ದರು ಎಂದು ಹೇಳುತ್ತಾರೆ. ಈ ವಿಚಾರವನ್ನು ಮಹಜರ್‌ನಲ್ಲಿ ಮತ್ತು ವಾರಂಟ್‌ನಲ್ಲಿ ಬರೆದಿರುವುದಿಲ್ಲ.

ತಕರಾರುದಾರರ ಪರ ವಕೀಲರಾದ ಶ್ರೀ ಜಾವೀದ್ ಇವರಿಂದ ಪಾಟೀ ಸವಾಲುಃ

ತಕರಾರುದಾರರಾದ ಜಾವೀದ ಇವರಿಗೆ ನೋಟಿಸ್‌ನ್ನು ನಾನು ನೀಡಿರುವುದಿಲ್ಲ. ಕಾರಣ ನನಗೆ ಯಾವುದೇ ಆದೇಶ ಇರಲಿಲ್ಲ. ನಿಪಿ-43 ಮತ್ತು ನಿಪಿ-44 ರ ದಾಖಲೆಗಳನ್ನು ಡಿಕ್ರಿದಾರರ ಜೊತೆ ಷರಿಕ್ಕಾಗಿ ಸೃಷ್ಟನೆ ಮಾಡಲಾಗಿರುತ್ತದೆ ಅಂದರೆ ಸರಿಯಲ್ಲ. ನಾನು ದಾವಾ ಐಟಂ ನಂ 4 ರ ಸ್ವಾದೀನವನ್ನು ಡಿಕ್ರಿದಾರರಿಗೆ ವಹಿಸಿಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಸ್ವಾದೀನ ರಸೀದಿ ಮತ್ತು ಮಹಜರ್‌ನ್ನು ನಾನೇ ಬರೆದಿರುತ್ತೇನೆ. ಬೇರೆ ಯಾರು ಹೇಳಿ ಬರೆಸಿರುವುದಿಲ್ಲ. ದಾವಾ ಐಟಂ 4 ರ ಪೂರ್ವಕ್ಕೆ ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ ಮುಖ್ಯ ರಸ್ತೆ, ಉತ್ತರಕ್ಕೆ ಚೌಡಮ್ಮ ದೇವಸ್ಥಾರ ಮತ್ತು ದಕ್ಷಿಣಕ್ಕೆ ಹಾಗೂ ಇತರರ ಆಸ್ತಿಗಳು ಇರುತ್ತವೆ. ಸದರಿ ಐಟಂ ಆಸ್ತಿಯ ಆಜುಬಾಜುದಾರರನ್ನು ಸ್ಥಳಕ್ಕೆ ಕರೆಸಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್‌ಗೆ ಮಂಜಪ್ಪ, ಮಂಜುನಾಥ, ಚಂದ್ರಪ್ಪ ಇವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಸಹಿ ಮಾಡಿರುವ ವ್ಯಕ್ತಿಗಳ ಆಸ್ತಿ ಸುತ್ತಮುತ್ತಲೂ ಇರುವುದಿಲ್ಲ ಅಂದರೆ ಸರಿಯಲ್ಲ. ಸ್ಥಳದಲ್ಲಿ ದಾಖಲೆಗಳನ್ನು ತಯಾರು ಮಾಡದೇ ಕಚೇರಿಯಲ್ಲಿ ತಯೂರು ಮಾಡಿ ನಂತರ ಎಲ್ಲರ ಸಹಿಗಳನ್ನು ಪಡೆದಿರುತ್ತೇನೆ ಅಂದರೆ ಸರಿಯಲ್ಲ. ಮಹಜರ್‌ಗೆ ಸಹಿ ಮಾಡಿರುವುದಿಲ್ಲ. ಡಿಕ್ರಿದಾರರಿಗೆ ವಹಿಸಿಕೊಟ್ಟ ಅಸ್ತಿಯ ವಿವರವನ್ನು ಹೇಳಲು ಆಗುವುದಿಲ್ಲ ಅಂದರೆ ಸರಿಯಲ್ಲ. ಸರ್ವೆಯರ್‌ರವರು ಆಸ್ತಿಯುನ್ನು ಗುರ್ತಿಸಿ ಎಷ್ಟು ಕಲ್ಲುಗಳನ್ನು ಹಾಕಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ನಾಲ್ಕು ಕಲ್ಲುಗಳನ್ನು ಹಾಕಿರುವುದಾಗಿ ಹೇಳುತ್ತಾರೆ. ಈ

ವಿಚಾರವನ್ನು ಮಹಜರ್‌ನಲ್ಲಿ ಬರೆದಿರುವುದಿಲ್ಲ ಅಂದರೆ ಸರಿ. ನಾನು ದಾವಾ ಐಟಂ 4 ರ ಆಸ್ತಿಯ ಸ್ವಾದೀನದಲ್ಲಿದ್ದ ವ್ಯಕ್ತಿಯಿಂದ ಡಿಕ್ರಿದಾರರಿಗೆ ಸ್ವಾದೀನವನ್ನು ಬಿಡಿಸಿಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಆಸ್ತಿಯ ಸ್ವಾದೀನದಲ್ಲಿದ್ದ ವಕ್ತಿ ಅನ್ವರ ಸ್ವಾಬ್ ಮತ್ತು ದಕ್ಷಿಣದ ಚಕ್ಕುಬಂದಿಯಲ್ಲಿನ ಅನ್ವರ್‌ಸಾಬ್ ಇಬ್ಬರು ಒಬ್ಬರೆ ಇರುತ್ತಾರೆ. ಸದರಿ ಆಸ್ತಿಯಲ್ಲಿ ಈಗಲೂ ಸಹ ಜಾವಿದ್‌ರವರು ಸ್ವಾದೀನದಲ್ಲಿರುತ್ತಾರೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,

ಹರಿಹರ.